

بِسْمِ اللَّهِ الرَّحْمَنِ الرَّحِيمِ

# ಹಝ್ರತ್ ಅಮ್ಮಾರ್ ಬಿನ್ ಯಾಸಿರ್ (ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **22-06-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಾರಂಭ ಕಾಲದ ಮತ್ತು ತ್ಯಾಗಶೀಲರಾದ ಒಬ್ಬ ಸಹಾಬಿ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಆಗಿದ್ದರು. ಅವರ ತಂದೆ ಹಝ್ರತ್ ಯಾಸಿರ್, ಖಹ್‌ತಾನಿ ವಂಶಜರಾಗಿದ್ದರು. ಯಮನ್ ಅವರ ಮೂಲ ದೇಶವಾಗಿತ್ತು. ಅವರು ತಮ್ಮ ಇಬ್ಬರು ಸಹೋದರರಾದ ಹಾರಿಸ್ ಮತ್ತು ಮಾಲಿಕ್‌ರೊಂದಿಗೆ ತಮ್ಮ ಇನ್ನೊಬ್ಬ ಸಹೋದರನನ್ನು ಹುಡುಕಲು ಮಕ್ಕಕ್ಕೆ ಬಂದಿದ್ದರು. ಹಾರಿಸ್ ಮತ್ತು ಮಾಲಿಕ್ ಯಮನಿಗೆ ಮರಳಿದರು. ಆದರೆ ಹಝ್ರತ್ ಯಾಸಿರ್ ಮಕ್ಕದಲ್ಲಿಯೇ ವಾಸಿಸಲು ತೊಡಗಿದರು. ಅಬೂ ಹುಝೈಫ ಮಖ್‌ಝೂಮಿಯೊಂದಿಗೆ ಅವರು ಪ್ರತಿಜ್ಞಾಬದ್ಧ ಸಂಬಂಧ ಸ್ಥಾಪಿಸಿದ್ದರು. ಅಬೂ ಹುಝೈಫರು ತನ್ನ ದಾಸಿಯಾದ ಹಝ್ರತ್ ಸುಮಯ್ಯಾರನ್ನು ಅವರಿಗೆ ವಿವಾಹ ಮಾಡಿಕೊಟ್ಟರು. ಈ ದಂಪತಿಗಳಿಗೆ ಹಝ್ರತ್ ಅಮ್ಮಾರ್ ಜನಿಸಿದರು. ಅಬೂ ಹುಝೈಫ ಮೃತನಾಗುವ ತನಕ ಹಝ್ರತ್ ಅಮ್ಮಾರ್ ಮತ್ತು ಹಝ್ರತ್ ಯಾಸಿರ್ ಅವರೊಂದಿಗೆ ಜೀವಿಸುತ್ತಿದ್ದರು. ಇಸ್ಲಾಮ್ ಧರ್ಮ ಸ್ಥಾಪಿತವಾದಾಗ ಹಝ್ರತ್ ಯಾಸಿರ್, ಹಝ್ರತ್ ಸುಮಯ್ಯ, ಹಝ್ರತ್ ಅಮ್ಮಾರ್ ಮತ್ತು ಅವರ ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಯಾಸಿರ್ ಇಸ್ಲಾಂ ಧರ್ಮ ಸ್ವೀಕರಿಸಿದರು. ಹಝ್ರತ್ ಅಮ್ಮಾರ್ ಹೇಳುತ್ತಾರೆ: ನಾನು ಹಝ್ರತ್ ಸುಹೈಬ್ ಬಿನ್ ಸಿನಾನ್‌ರನ್ನು ದಾರ್ ಅರ್‌ಖಮಿನ ಬಾಗಿಲಿನ ಬಳಿ ಕಂಡೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮಿನಲ್ಲಿದ್ದರು. ನಾನು ಸುಹೈಬ್‌ರೊಂದಿಗೆ ಕೇಳಿದೆ: ನೀವು ಯಾವ ಉದ್ದೇಶದಿಂದ ಆಗಮಿಸಿದ್ದೀರಿ? ಆಗ ಸುಹೈಬ್ ಕೇಳಿದರು: ನಿಮ್ಮ ಉದ್ದೇಶವೇನು? ನಾನು ಹೇಳಿದೆ: ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಹೋಗಿ ಅವರ ಮಾತುಗಳನ್ನು ಆಲಿಸಲು ಇಚ್ಛಿಸುತ್ತೇನೆ. ಸುಹೈಬ್ ಹೇಳಿದರು: ನನ್ನ ಇಚ್ಛೆಯೂ ಅದೇ ಆಗಿದೆ. ಹಝ್ರತ್ ಅಮ್ಮಾರ್ ಹೇಳುತ್ತಾರೆ: ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾದೆವು. ಅವರು ನಮಗೆ ಇಸ್ಲಾಮಿನ ಬಗ್ಗೆ ತಿಳಿಸಿದರು. ನಾವು ಇಸ್ಲಾಮಿಗೆ ಪ್ರವೇಶಿಸಿದೆವು. ಸಾಯಂಕಾಲ ತನಕ ನಾವು ಅಲ್ಲೇ ಇದ್ದೆವು. ನಂತರ ನಾವು ದಾರ್ ಅರ್‌ಖಮ್‌ನಿಂದ ಅಡಗಿಕೊಂಡು ಹೊರಗೆ ಬಂದೆವು.

ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಮಕ್ಕದಲ್ಲಿದ್ದ ಬಲಹೀನ ಜನರಲ್ಲಿ ಒಬ್ಬರಾಗಿದ್ದರು. ಅವರು ಹೊಸದಾಗಿ ಸ್ವೀಕರಿಸಿದ ಧರ್ಮವನ್ನು ಬಿಟ್ಟು ಬಿಡುವಂತೆ ಅವರಿಗೆ ಮಕ್ಕದವರು ಕಷ್ಟ ನೀಡುತ್ತಿದ್ದರು. ಮಕ್ಕದ ಖುರೈಶಿಗಳು ಮಧ್ಯಾಹ್ನದ ಸುಡು ಬಿಸಿಲಿನಲ್ಲಿ ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರಂತಹ ಜನರಿಗೆ, ಅವರು ಧರ್ಮ ತ್ಯಾಗ ಮಾಡಲಿ ಎಂದು ಕಠಿಣ ಹಿಂಸೆ ನೀಡುತ್ತಿದ್ದರು. ಉಮರ್ ಬಿನ್ ಅಲ್‌ಹಕಮ್ ಹೇಳುತ್ತಾರೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್, ಹಝ್ರತ್ ಸುಹೈಬ್ ಮತ್ತು ಹಝ್ರತ್ ಅಬೂ ಫಖೀಹರಿಗೆ ಎಷ್ಟು ತೀವ್ರವಾಗಿ ಹಿಂಸಿಸಲಾಗುತ್ತಿತ್ತು ಎಂದರೆ ಅವರ ಬಾಯಿಯಿಂದ ಎಂತಹ ಮಾತುಗಳು ಹೊರಡುತ್ತಿತ್ತೆಂದರೆ ಅವುಗಳನ್ನು ಅವರು ಸತ್ಯವೆಂದು ಗಣಿಸುತ್ತಿರಲಿಲ್ಲ. ಆದರೆ ದೌರ್ಜನ್ಯಗಾರರು ಬಲಾತ್ಕಾರ ಮಾಡಿ ಆ ಮಾತುಗಳನ್ನು ಅವರ ಬಾಯಿಯಿಂದ ಹೊರಡಿಸುತ್ತಿದ್ದರು. ಮುಹಮ್ಮದ್ ಬಿನ್ ಕಅಬ್ ಖುರ್‌ಝೀ ಹೇಳುತ್ತಾರೆ: ನನ್ನೊಂದಿಗೆ ಒಬ್ಬ ವ್ಯಕ್ತಿ ಹೇಳಿದನು: ಅವನು ಹಝ್ರತ್ ಅಮ್ಮಾರ್‌ರ ಬೆನ್ನಿನಲ್ಲಿ ಬಾಸುಂಡೆಗಳನ್ನೂ ಗಾಯಗಳನ್ನೂ ನೋಡಿದನು ಎಂದು. ಅದರ ಬಗ್ಗೆ ವಿಚಾರಿಸಿದಾಗ ಹಝ್ರತ್ ಅಮ್ಮಾರ್ ಹೇಳಿದರು: ಇದು ಖುರೈಶರು ಮಧ್ಯಾಹ್ನದ ಕಡುಬಿಸಿಲಿನಲ್ಲಿ ನೀಡುತ್ತಿದ್ದ ಹಿಂಸಾಚಾರಗಳ ಚಿಹ್ನೆಗಳಾಗಿವೆ ಎಂದು. ಅಮರ್ ಬಿನ್ ಮೈಮೂನ್ ಹೇಳುತ್ತಾರೆ, ಬಹುದೇವಾರಾಧಕರು ಹಝ್ರತ್ ಅಮ್ಮಾರ್‌ರನ್ನು ಬೆಂಕಿಯಿಂದ ಸುಡಲು ಪ್ರಯತ್ನಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಸಮೀಪದಿಂದ ದಾಟಿ ಹೋಗುವಾಗ ಅವರ ತಲೆಯ ಮೇಲೆ ಕೈಯಾಡಿಸುತ್ತಾ ಹೇಳಿದರು: **ಯಾ ನಾರು ಕೂನೀ ಬರ್‌ದನ್ ವ ಸಲಾಮನ್ ಅಲಾ ಅಮ್ಮಾರ, ಕಮಾ ಕುನ್‌ತ ಅಲಾ ಇಬ್ರಾಹೀಮ.** ಎಲೈ ಅಗ್ನಿಯೇ ನೀನು ತಣ್ಣಗಾಗು, ಅಮ್ಮಾರ್‌ಗೋಸ್ಕರ ಶಾಂತಿದಾಯಕನಾಗು- ಇಬ್ರಾಹೀಮರಿಗೆ ಸಂಭವಿಸಿದ ಹಾಗೆ.

ಒಂದು ವರದಿಯಲ್ಲಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಹೇಳುತ್ತಾರೆ: ನಾನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಕಣಿವೆ ಪ್ರದೇಶದಲ್ಲಿ ಹೋಗುತ್ತಿದ್ದೆವು. ಆಗ ಅಲ್ಲಿ ಒಂದು ಸ್ಥಳದಲ್ಲಿ ಅಮ್ಮಾರರ ಪಿತನಿಗೂ ಅಮ್ಮಾರರಿಗೂ ಅವರ ತಾಯಿಗೂ ಕಷ್ಟ ನೀಡುತ್ತಿದ್ದುದಾಗಿ ಕಂಡೆವು. ಹಝ್ರತ್ ಯಾಸಿರ್ ಕೇಳಿದರು: ಏನು ಯಾವಾಗಲೂ ಹೀಗೆಯೇ ಸಂಭವಿಸುವುದೇ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸಹನೆ ದೋರಿರಿ. ಅನಂತರ ಅವರು ಪ್ರಾರ್ಥಿಸಿದರು. ಓ ಅಲ್ಲಾಹ್ ಯಾಸಿರ್ ಕುಟುಂಬದವರಿಗೆ ಕ್ಷಮೆ ದಯಪಾಲಿಸು. ನಿಶ್ಚಯವಾಗಿಯೂ ನೀನು ಅವರಿಗೆ ಕ್ಷಮೆ ನೀಡಿರುವೆ. ಎಂದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದನು- ಅವರಿಗೆ ಕ್ಷಮೆ ದೊರೆತಿದೆ ಎಂದು. ಇನ್ನೊಂದು ಹದಿಸೀನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರರ ಕುಟುಂಬದ ಸಮೀಪ ದಾಟಿ ಹೋಗುವಾಗ ಅವರಿಗೆ ಬಹುದೇವಾರಾಧಕರು ಕಷ್ಟ ನೀಡುವುದನ್ನು ಕಂಡು ಹೇಳಿದರು- ಓ ಅಮ್ಮಾರ್ ಕುಟುಂಬದವರೇ, ನೀವು ಸಂತೋಷಪಡಿರಿ. ನಿಶ್ಚಯವಾಗಿಯೂ ನಿಮಗೆ ಸ್ವರ್ಗದ ವಾಗ್ದಾನ ನೀಡಲಾಗಿದೆ.

ಹಝ್ರತ್ ಅಮ್ಮಾರರ ತಲೆಯನ್ನು ನೀರಿನಲ್ಲಿ ಮುಳುಗಿಸುತ್ತಾ ಶತ್ರುಗಳು ಹೊಡೆಯುತ್ತಾ ಇದ್ದರು. ಬೇರೆ ರೀತಿಯ ಕಷ್ಟಗಳನ್ನೂ ಕೊಡುತ್ತಿದ್ದರು. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರರನ್ನು ಕಂಡಾಗ ಅವರು ಅಳುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರರ ಕಣ್ಣೀರು ಒರಸುತ್ತಾ ಹೇಳಿದರು, ಅವಿಶ್ವಾಸಿಗಳು ನಿಮ್ಮನ್ನು ಹಿಡಿಗೂಡಿದರು. ಅನಂತರ ಅವರು ನಿಮ್ಮನ್ನು ತಲೆಕೆಳಗಾಗಿ ನೀರಲ್ಲಿ ಮುಳುಗಿಸುತ್ತಾ ಇದ್ದರು. ನೀವು ಅವರೊಂದಿಗೆ ಇಂತಿಂತಹ ಮಾತು ಹೇಳಿದಿರಿ. ನಿಮ್ಮನ್ನು ಬಹುದೇವಾರಾಧಕರು ಪುನಃ ಹಿಡಿಗೂಡಿದರೆ ಆ ಮಾತುಗಳನ್ನೇ ಹೇಳಿರಿ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸೀರತ್ ಖಾತಮುನ್ನಬಿಯ್ಯೀನ್ ಎಂಬ ತನ್ನ ಪುಸ್ತಕದಲ್ಲಿ ಹೀಗೆ ವಿವರಿಸಿದ್ದಾರೆ: ಹಝ್ರತ್ ಅಮ್ಮಾರ್, ಅವರ ಪಿತ ಯಾಸಿರ್ ಮತ್ತು ಅವರ ತಾಯಿ ಸುಮಯ್ಯಾರಿಗೆ, ಹಿಂದೆ ಸುಮಯ್ಯ ದಾಸಿಯಾಗಿದ್ದ ಬನೀ ಮಖ್ಝೂಮ್ ಗೋತ್ರದವರು ಎಷ್ಟು ಕಷ್ಟ ನೀಡುತ್ತಿದ್ದರೆಂದರೆ ಅದರ ವಿವರಣೆ ಓದುವಾಗ ಶರೀರದಲ್ಲಿ ನಡುಕ ಉಂಟಾಗುತ್ತದೆ. ಇಸ್ಲಾಮಿಗೆ ಆತ್ಮ ಬಲಿದಾನ ಮಾಡಿದ ಈ ಕುಟುಂಬದವರಿಗೆ ಒಮ್ಮೆ ಶಾರೀರಿಕ ಯಾತನೆ ನೀಡುತ್ತಿದ್ದಾಗ ಆಕಸ್ಮಿಕವಾಗಿ ಅಲ್ಲಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಂದರು. ಅವರು ದುಃಖಭರಿತರಾಗಿ ಹೇಳಿದರು: **ಸಬ್‌ರನ್ ಆಲ ಯಾಸಿರ್ ಫ ಇನ್ನ ಮೌಇದಕುಮುಲ್ ಜನ್ನತ.** ಓ ಯಾಸಿರ್ ಕುಟುಂಬವೇ, ಸಹನೆ ಕೈಬಿಡಬೇಡಿರಿ. ಅಲ್ಲಾಹನು ನಿಮ್ಮ ಈ ಕಷ್ಟಗಳಿಗೆ ಪ್ರತಿಫಲವಾಗಿ ಸ್ವರ್ಗ ನೀಡುವನು. ಕೊನೆಗೆ ಯಾಸಿರ್ ಈ ಕಷ್ಟಗಳಿಗೆ ಗುರಿಯಾಗಿ ಮೃತರಾದರು. ವೃದ್ಧೆ ಸುಮಯ್ಯರ ತೊಡೆಗೆ ಅಬೂ ಜಹಲನು ಈಟಿಯಿಂದ ತಿವಿದಾಗ ಅದು ಅವರ ಶರೀರವನ್ನು ದಾಟುತ್ತಾ ಗುಹ್ಯಾಂಗದ ತನದ ತಲಪಿತು. ಆ ನಿಷ್ಕಳಂಕ ಮಹಿಳೆ ಅಸಹ್ಯ ವೇದನೆಯಿಂದ ನರಳುತ್ತಾ ಮೃತರಾದರು. ಬದುಕುಳಿದ ಹಝ್ರತ್ ಅಮ್ಮಾರರಿಗೂ ಅತ್ಯಂತ ತೀವ್ರ ಕಷ್ಟ ಮತ್ತು ದುಃಖ ನೀಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಗ್ರಂಥವಾದ ಚಶ್ಮಯೆ ಮಅರಿಫತ್‌ನಲ್ಲಿ ಒಬ್ಬ ಹಿಂದೂ ಲೇಖಕ ಪ್ರಕಾಶ್ ದೇವ್‌ಜಿ ಬರೆದ "ಸವಾನಿಹೆ ಉಮ್ರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್" ಎಂಬ ಪುಸ್ತಕದಿಂದ ಕೆಲವು ಉಲ್ಲೇಖಗಳನ್ನು ನೀಡಿದ್ದಾರೆ. ಆ ಲೇಖಕ ಬರೆಯುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಮೇಲೆ ಶತ್ರುಗಳು ಮಾಡುತ್ತಿದ್ದ ದೌರ್ಜನ್ಯಗಳನ್ನು ಸಹಿಸುತ್ತಿದ್ದರು. ಆದರೆ ಅವರ ಸ್ನೇಹಿತರಿಗೆ ಶತ್ರುಗಳು ನೀಡುತ್ತಿದ್ದ ಯಾತನೆಗಳನ್ನು ನೋಡುವಾಗ ಅವರಿಗೆ ಅದು ಅಸಹನೀಯವಾಗಿತ್ತು. ಆ ಬಡವರಾದ ವಿಶ್ವಾಸಿಗಳ ಮೇಲೆ ದೌರ್ಜನ್ಯಗಳ ಪರ್ವತ ಕುಸಿದು ಬಿದ್ದಿತ್ತು. ಜನರು ವಿಶ್ವಾಸಿಗಳನ್ನು ಹಿಡಿಗೂಡಿ ಮರುಭೂಮಿಗೆ ಕರೆದುಕೊಂಡು ಹೋಗಿ ನಗ್ನರನ್ನಾಗಿ ಮಾಡಿ ಬಿಸಿಲಿನಿಂದ ಕಡು ಬಿಸಿಯಾದ ಮರಳಿನಲ್ಲಿ ಮಲಗಿಸಿ ಅವರ ಎದೆಗಳ ಮೇಲೆ ಕಲ್ಲು ಚಪ್ಪಡಿಗಳನ್ನು ಇರಿಸುತ್ತಿದ್ದರು. ಬೇಸಗೆಯ ಅಗ್ನಿಯಿಂದ ನರಳುತ್ತಾ ಅವರ ನಾಲಗೆಗಳು ಹೊರಬರುತ್ತಿದ್ದುವು. ಅನೇಕ ಜನರ ಜೀವ ಈ ಶಿಕ್ಷೆಯಿಂದ ಹೊರಟು ಹೋದುವು. ಇಂತಹ ದೌರ್ಜನ್ಯ ಪೀಡಿತರಲ್ಲಿ ಒಬ್ಬರು ಅಮ್ಮಾರ್ ಆಗಿದ್ದರು. ಅವರನ್ನು ಬಿಸಿಲಿನ ತಾಪದಿಂದ ಬಿಸಿಯಾದ ಕಲ್ಲುಭರಿತ ನೆಲದಲ್ಲಿ ಮಲಗಿಸಿ ಅವರ ಎದೆಯ ಮೇಲೆ ಕಲ್ಲು ಇರಿಸುತ್ತಿದ್ದರು ಮತ್ತು ಶತ್ರುಗಳು ಹೇಳುತ್ತಿದ್ದರು– ಮುಹಮ್ಮದ್‌ನನ್ನು ನಿಂದಿಸು ಎಂದು. ಅವರ ವೃದ್ಧ ಪಿತ ಸಹ ಇದೇ ದೌರ್ಜನ್ಯಕ್ಕೆ ಪಾತ್ರರಾಗಿದ್ದರು. ಅವರ ತಾಯಿ ಸುಮಯ್ಯ ಇದನ್ನು ನೋಡಿ ಸಹಿಸಲಾಗದೆ ವಿನಯದಿಂದ ಆಕ್ಷೇಪವೆತ್ತಿದಾಗ – ಆ ನಿಷ್ಕಳಂಕ ವಿಶ್ವಾಸಿನಿ ಮಹಿಳೆಯ ಕಣ್ಣುಗಳ ಮುಂದೆ ಆ ದೌರ್ಜನ್ಯ ನಡೆಸಲಾಗುತ್ತಿತ್ತು – ಆಕೆಯನ್ನು ನಗ್ನಳನ್ನಾಗಿ ಮಾಡಿ ಎಂತಹ ಕಷ್ಟ ನೀಡಿದರೆಂದರೆ ಅದನ್ನು ವಿವರಿಸುವುದು ಲಜ್ಜೆಗೇಡು ಆಗಿದೆ. ಕೊನೆಗೆ ಆ ವಿಶ್ವಾಸಿ ಮಹಿಳೆ ನೋವಿನಿಂದ ನರಳುತ್ತಾ ಮೃತಳಾದಳು. ಇದು ಒಬ್ಬ ಹಿಂದೂ ಲೇಖಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಹಾಬರ ಬಗ್ಗೆ ಬರೆದ ಪುಸ್ತಕದ ಸಾರಾಂಶವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಪುಸ್ತಕದಲ್ಲಿ ಸೇರಿಸಿದ ಭಾಗವಾಗಿದೆ.

ಹಝ್ರತ್ ಅಮ್ಮಾರ್ ತಮ್ಮ ಮನೆಯಲ್ಲಿ ಆರಾಧನೆಗೋಸ್ಕರ ಮಸ್ಜಿದ್ ನಿರ್ಮಿಸಿದ ಪ್ರಥಮ ವ್ಯಕ್ತಿಯಾಗಿದ್ದಾರೆ. ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಮದೀನಕ್ಕೆ ಹಿಜ್ರತ್ ಮಾಡಿದಾಗ ಮದೀನದಲ್ಲಿ ಹಝ್ರತ್ ಮುಬಶ್ಶಿರ್ ಬಿನ್ ಅಬ್ದುಲ್ ಮುಂಝಿರ್‌ರವರ ಮನೆಯಲ್ಲಿ ತಂಗಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹುಝೈಫ ಬಿನ್ ಅಲ್‌ಯಮಾನ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಅಮ್ಮಾರ್ ರಝಿಯಲ್ಲಾಹು ಅನ್‌ಹುರವರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರರಿಗೆ ಒಂದು ಮನೆ ನಿವೇಶನ ನೀಡಿದರು. ಹಝ್ರತ್ ಅಬೂ ಸಈದ್ ಖುದ್ರಿ ಹೇಳುತ್ತಾರೆ: ಮಸ್‌ಜಿದ್ ನಬವೀ ನಿರ್ಮಿಸುವಾಗ ನಾವು ಒಂದೊಂದು ಇಟ್ಟಿಗೆ ಎತ್ತಿಕೊಂಡು ಬರುತ್ತಿದ್ದೆವು. ಹಝ್ರತ್ ಅಮ್ಮಾರ್ ಎರಡೆರಡು ಇಟ್ಟಿಗೆ ಎತ್ತಿಕೊಂಡು ಬರುತ್ತಿದ್ದರು. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರರ ತಲೆಯಿಂದ ಮಣ್ಣನ್ನು ಒರಸಿ ತೆಗೆಯುತ್ತಾ ಹೇಳಿದರು: ವಿದ್ರೋಹಿಗಳ ಗುಂಪು ಅವರನ್ನು ಕೊಂದುಹಾಕಬಹುದೆಂಬುದು ಖೇದಕರವಾಗಿದೆ. ಅಮ್ಮಾರ್ ಅವರನ್ನು ಅಲ್ಲಾಹನ ಕಡೆಗೆ ಕರೆಯುತ್ತಾರೆ. ಆದರೆ ಅವರು ಅಗ್ನಿಯ ಕಡೆಗೆ ಕರೆಯುತ್ತಿದ್ದಾರೆ. ಹಝ್ರತ್ ಅಮ್ಮಾರ ಹೀಗೆ ಪ್ರಾರ್ಥಿಸುತ್ತಿದ್ದರು: ನಾನು ಫಿತ್ನಗಳಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ.

ಅಬ್ದುಲ್ಲಾ ಬಿನ್ ಅಬೀ ಹಝೀಲ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸ್‌ಜಿದ್ ನಿರ್ಮಿಸುತ್ತಿದ್ದಾಗ ಎಲ್ಲಾ ಜನರು ಇಟ್ಟಿಗೆ ಕಲ್ಲು ಮೊದಲಾದುವುಗಳನ್ನು ಹೊತ್ತು ತರುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಮ್ಮಾರ್ ಸಹ ಇಟ್ಟಿಗೆ, ಕಲ್ಲು ಹೊತ್ತು ತರುತ್ತಿದ್ದರು. ಹಝ್ರತ್ ಅಮ್ಮಾರ್ ಈ ಕೆಳಗಿನ ಚರಣ ಹಾಡುತ್ತಿದ್ದರು. **ನಹ್‌ನುಲ್ ಮುಸ್ಲಿಮೂನ್ ನಬ್‌ತನಿಲ್ ಮಸಾಜಿದ್.** ಮುಸ್ಲಿಮರಾದ ನಾವು ನಮ್ಮ ಮಸ್‌ಜಿದ್

ನಿರ್ಮಿಸುತ್ತಿದ್ದೇವೆ. ಒಮ್ಮೆ ಜನರು ಹೇಳಿದರು: ಇಂದು ಅಮ್ಮಾರ್ ನಿಶ್ಚಯವಾಗಿಯೂ ಮೃತರಾಗುವರು. ಏಕೆಂದರೆ ಅವರು ಬಹಳ ಕೆಲಸ ಮಾಡುತ್ತಿದ್ದಾರೆ. ಅವರು ರೋಗದಿಂದ ಮುಕ್ತರಾಗಿ ಇತ್ತೀಚೆಗೆ ಬಂದಿದ್ದಾರೆ. ಅವರಿಗೆ ಬಲಹೀನತೆ ಬಹಳವಿದೆ. ಜನರ ಮಾತುಗಳನ್ನು ಆಲಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರ್‌ರೊಂದಿಗೆ ಇಟ್ಟಿಗೆ ಕೆಳಗಿಳಿಸಿ ವಿಶ್ರಾಂತಿ ಪಡೆಯಲು ಹೇಳಿದರು.

ಈ ಜನರು ಅತ್ಯಂತ ಬಲಹೀನರಾಗಿದ್ದಾಗ ಸಹ ಸೇವೆ ಮಾಡುವ ಕೆಲಸವನ್ನು ಬಿಟ್ಟು ಬಿಡಲು ಇಚ್ಛಿಸುತ್ತಿರಲಿಲ್ಲ. ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರವರು ಬದರ್, ಉಹುದ್, ಖಂದಖ್, ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಬೈಅತ್ ರಿಝ್ವಾನ್‌ನಲ್ಲಿ ಸಹ ಭಾಗವಹಿಸಿದ್ದರು.

ಹಝ್ರತ್ ಹಕಮ್ ಬಿನ್ ಅತೀಬ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ತಲಪುವಾಗ ಸೂರ್ಯ ಮೇಲೇರಿದ್ದನು. ಆಗ ಹಝ್ರತ್ ಅಮ್ಮಾರ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೆರಳಿನಲ್ಲಿ ಕುಳಿತುಕೊಳ್ಳಲು ಮತ್ತು ವಿಶ್ರಾಂತಿ ಪಡೆದು ನಮಾಝ್ ಮಾಡಲು ಪ್ರಶಸ್ತವಾದ ಒಂದು ಸ್ಥಳ ಗೊತ್ತುಪಡಿಸಬೇಕು. ಹಾಗೆ ಹಝ್ರತ್ ಅಮ್ಮಾರ್ ಕಲ್ಲುಗಳನ್ನು ಜಮಾಯಿಸಿ ಮಸ್‌ಜಿದ್ ಖುಬಾದ ಅಸ್ತಿಭಾರ ಹಾಕಿದರು. ಅದು ಮೊತ್ತಮೊದಲು ನಿರ್ಮಿಸಲಾದ ಮಸ್‌ಜಿದ್ ಆಗಿತ್ತು. ಹಝ್ರತ್ ಅಮ್ಮಾರ್ ಅದನ್ನು ನಿರ್ಮಿಸಿದ್ದರು.

ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ನಾನು ಹಝ್ರತ್ ಅಮ್ಮಾರ್‌ರನ್ನು ಯಮಾಮ ಯುದ್ಧದ ಸಂದರ್ಭದಲ್ಲಿ ನೋಡುವಾಗ ಅವರು ಒಂದು ಎತ್ತರವಾದ ಬಂಡೆ ಕಲ್ಲಿನ ಮೇಲೆ ನಿಂತು ಮುಸ್ಲಿಮರನ್ನು ಕರೆದು ಹೇಳುತ್ತಿದ್ದರು: ಓ ಮುಸ್ಲಿಮರೇ ನೀವು ಸ್ವರ್ಗದಿಂದ ಓಡಿ ಹೋಗುವಿರೇನು? ನಾನು ಅಮ್ಮಾರ್ ಬಿನ್ ಯಾಸಿರ್, ನನ್ನ ಬಳಿಗೆ ಬನ್ನಿರಿ. ಅವರು ಬಹಳ ಶೌರ್ಯವಂತರಾಗಿದ್ದರು. ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ಅವರ ಒಂದು ಕಿವಿ ಕತ್ತರಿಸಲ್ಪಟ್ಟು ಜೋಲಾಡುತ್ತಿರುವುದಾಗಿ ನಾನು ನೋಡಿದೆ. ಆದರೂ ಅವರು ಹೋರಾಟದಲ್ಲಿ ಮಗ್ನರಾಗಿದ್ದರು. ತಾರಿಖ್ ಬಿನ್ ಶಿಹಾಬ್ ಹೇಳುತ್ತಾರೆ: ಬನೂ ತಮೀಮ್ ಗೋತ್ರದ ಒಬ್ಬನು ಅಮ್ಮಾರರನ್ನು ಅಝ್‌ದಾ ಎಂದರೆ ಕಿವಿ ಕತ್ತರಿಸಲ್ಪಟ್ಟವ ಎಂದು ಲೇವಡಿ ಮಾಡಿದನು. ಹಝ್ರತ್ ಅಮ್ಮಾರ ಹೇಳಿದರು ನೀನು ನನ್ನ ಅತ್ಯುತ್ತಮ ಕಿವಿಯನ್ನು ನಿಂದಿಸಿರುವೆ ಎಂದು.

ಹಝ್ರತ್ ಖಾಲಿದ್ ಬಿನ್ ವಲೀದ್ ಹೇಳುತ್ತಾರೆ. ನಾನು ಹಝ್ರತ್ ಅಮ್ಮಾರ್‌ರೊಂದಿಗೆ ಒಮ್ಮೆ ಮಾತನಾಡಿದಾಗ ನಾನು ಅವರಿಗೆ ಕಟುಮಾತನ್ನು ಹೇಳಿಬಿಟ್ಟೆ. ಹಝ್ರತ್ ಅಮ್ಮಾರ್ ನನ್ನ ವಿರುದ್ಧ ದೂರು ನೀಡಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋದರು. ನಾನು ಸಹ ಅಲ್ಲಿಗೆ ಹೋದೆ. ಹಝ್ರತ್ ಅಮ್ಮಾರ್ ನನ್ನ ವಿರುದ್ಧ ದೂರು ಹೇಳುವಾಗ ಆಗಲೂ ಸಹ ನಾನು ಕಟುವಾಗಿ ವರ್ತಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವಾಗಿ ಕುಳಿತಿದ್ದರು. ಅವರು ಏನೂ ಮಾತನಾಡುತ್ತಿರಲಿಲ್ಲ. ಹಝ್ರತ್ ಅಮ್ಮಾರ್ ಅಳುತ್ತಾ ಹೇಳಿದರು: ಪ್ರವಾದಿವರ್ಯರೇ ನೀವು ಖಾಲಿದರ ಸ್ಥಿತಿಯನ್ನು ನೋಡುತ್ತಿಲ್ಲವೇ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಲೆ ಎತ್ತಿ ಹೇಳಿದರು: ಯಾರು ಅಮ್ಮಾರರರೊಂದಿಗೆ ಹಗೆತನ ಹೊಂದುವರೋ ಅವರನ್ನು ಅಲ್ಲಾಹನು ಹಗೆತನದಿಂದ ನೋಡುವನು. ಅಮ್ಮಾರರ ವಿರುದ್ಧ ದ್ವೇಷ ಹೊಂದಿದವನ ವಿರುದ್ಧ ಅಲ್ಲಾಹನು ದ್ವೇಷ ಹೊಂದುವನು. ಹಝ್ರತ್ ಖಾಲಿದ್ ಬಿನ್ ವಲೀದ್ ಹೇಳುತ್ತಾರೆ: ಆಗ ನನಗೆ ಲೋಕದಲ್ಲಿ ಅತ್ಯಂತ ಪ್ರಿಯವಾಗಿ ಇದ್ದುದು ಹಝ್ರತ್ ಅಮ್ಮಾರ್‌ರೊಂದಿಗೆ ಯಾವ ರೀತಿ ರಾಜಿ ಮಾಡಿಕೊಳ್ಳುವುದು ಎಂಬ ವಿಷಯವಾಗಿತ್ತು. ಹಝ್ರತ್ ಖಾಲಿದ್ ಹೇಳುತ್ತಾರೆ: ನಾನು ಹಝ್ರತ್ ಅಮ್ಮಾರರ ಬಳಿ ಸಾಗಿ ಅವರೊಡನೆ ಕ್ಷಮೆಯನ್ನು ಯಾಚಿಸಿದೆ. ಅವರು ಕ್ಷಮಿಸಿ ನನ್ನೊಂದಿಗೆ ಸ್ನೇಹ ಸಂಬಂಧ ಹೊಂದಿದರು.

ಹಝ್ರತ್ ಅಲಿ ವರದಿ ಮಾಡುತ್ತಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಕುಳಿತಿದ್ದೆ. ಆಗ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಒಳಗೆ ಬರಲು ಅನುಮತಿ ಕೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನುಮತಿ ನೀಡಿ, ಪರಿಶುದ್ಧನಾದ ವ್ಯಕ್ತಿಗೆ ಸ್ವಾಗತ ಎಂದು ಹೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರ್‌ರಿಗೆ ನೀಡಿದ ಗೌರವವಾಗಿತ್ತು ಅದು. ಹಝ್ರತ್ ಅಮರೂ ಬಿನ್ ಶರ್‌ಜೀಲ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಮ್ಮಾರ್ ಬಿನ್ ಯಾಸಿರ್‌ರ ರಕ್ತನಾಳಗಳಲ್ಲೂ ಪಾದಗಳಲ್ಲೂ ಸತ್ಯವಿಶ್ವಾಸ ತುಂಬಿದೆ. ಅಲ್ಲಾಹನು ಶೈತಾನನ ಆಕ್ರಮಣಗಳಿಂದ ರಕ್ಷಣೆ ನೀಡಿರುವವರಲ್ಲಿ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಸೇರಿದ್ದಾರೆ.

ಹಝ್ರತ್ ಉಮರ್‌ರವರು ಅಮ್ಮಾರ್ ಬಿನ್ ಯಾಸಿರ್‌ರನ್ನು ಕೂಫದ ಅಮೀರರನ್ನಾಗಿ ಮಾಡಿದ್ದರು. ಕೂಫದ ಜನರಿಗೆ ಹೀಗೆ ಆಜ್ಞೆ ನೀಡಿದ್ದರು: ನಾನು ಅಮ್ಮಾರ್ ಬಿನ್ ಯಾಸಿರನ್ನು ಅಮೀರರಾಗಿಯೂ ಇಬ್ನು ಮಸ್‌ಊದರನ್ನು ಅಧ್ಯಾಪಕರನ್ನಾಗಿಯೂ ವಝೀರ್ ಆಗಿಯೂ ನೇಮಿಸಿ ಕಳುಹಿಸುತ್ತಿದ್ದೇನೆ. ಬೈತುಲ್ ಮಾಲಿನ ವ್ಯವಸ್ಥೆ ಇಬ್ನು ಮಸ್‌ಊದ್‌ರಿಗೆ ವಹಿಸಿಕೊಡಲಾಗಿದೆ. ಇವರಿಬ್ಬರೂ ಬದರ್ ಯುದ್ಧದಲ್ಲಿ ಭಾಗವಹಿಸಿದ ಗೌರವಾನ್ವಿತ ಸಹಾಬರಾಗಿದ್ದಾರೆ. ಆದುದರಿಂದ ಇವರಿಬ್ಬರನ್ನು ಅನುಸರಿಸಿ ಕಾರ್ಯನಿರತರಾಗಿರಿ.

ಹಝ್ರತ್ ಉಸ್ಮಾನ್ ವಿರುದ್ಧ ಪಿತೂರಿ ನಡೆಸಿದ ಕಪಟ ವಿಶ್ವಾಸಿಗಳು ಮತ್ತು ವಿದ್ರೋಹಿಗಳು ಮದೀನದಲ್ಲಿ ಗಲಬೆಗೊಂದಲ ಪ್ರಾರಂಭಿಸಿದಾಗ ಹಝ್ರತ್ ಅಮ್ಮಾರ್ ತಮ್ಮ ಮುಗ್ಧತೆಯ ಕಾರಣದಿಂದ ಪಿತೂರಿಗಾರರ ಒಳಸಂಚಿನಲ್ಲಿ ಸಿಲುಕಿಕೊಂಡರು. ಆದರೆ ಅವರು ಕೃತ್ಯರೂಪದಲ್ಲಿ ಅವರೊಂದಿಗೆ ಭಾಗವಹಿಸಿರಲಿಲ್ಲ. ಈ ಕಾರಣದಿಂದ ಆ ಪಿತೂರಿಯಲ್ಲಿ ಅವರ ಪಾಲು ಇರಲಿಲ್ಲ.

ಹಝ್ರತ್ ಅಲಿಯವರ ಖಿಲಾಫತ್ ಕಾಲಘಟ್ಟದಲ್ಲಿ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಹಝ್ರತ್ ಅಲಿಯವರ ಜೊತೆಗೆ ಜಮಲ್ ಯುದ್ಧ ಮತ್ತು ಸಿಫ್ಫೀನ್ ಯುದ್ಧದಲ್ಲಿ ಭಾಗವಹಿಸಿದ್ದರು. ಅಬೂ ಅಬ್ದುರ್ರಹ್ಮಾನುಸ್ಸಲ್‌ಮೀ ಹೇಳುತ್ತಾರೆ: ಸಿಫ್ಫೀನ್ ಯದ್ಧದಲ್ಲಿ ನಾವು ಹಝ್ರತ್ ಅಲಿಯವರ

ಜೊತೆಗಿದ್ದೆವು. ನಾನು ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರನ್ನು ನೋಡಿದಾಗ ಅವರು ಯಾವ ಕಡೆಗೆ ಹೋಗುತ್ತಿದ್ದರೋ ಅವರನ್ನು ಹಿಂಬಾಲಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಹೋಗುತ್ತಿದ್ದರು. ಹಝ್ರತ್ ಅಮ್ಮಾರ್ ಅವರಿಗೆ ಒಂದು ಪತಾಕೆಯ ಹಾಗಿದ್ದರು. ಅಬುಲ್ ಬಖ್ತರಿ ಹೇಳುತ್ತಾರೆ: ಸಿಫ್ಫೀನ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಅಮ್ಮಾರ್ ಹೇಳಿದರು: ನನಗೆ ಕುಡಿಯಲು ಹಾಲು ತನ್ನಿರಿ. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು ನೀನು ಲೋಕದಲ್ಲಿ ಕುಡಿಯಲಿರುವ ಕೊನೆಯ ಪಾನೀಯ ಹಾಲು ಆಗಿರುವುದು ಎಂದು. ಆಗ ಹಾಲು ತರಲಾಯಿತು. ಹಝ್ರತ್ ಅಮ್ಮಾರ್ ಹಾಲು ಕುಡಿದರು. ಅನಂತರ ಮುಂದೆ ಸಾಗಿ ಹೋರಾಡಿ ಶಹೀದರಾದರು.

ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಸಿಫ್ಫೀನ್ ಯುದ್ಧದ ಸಂದರ್ಭದಲ್ಲಿ ಹೇಳಿದ್ದರು: ಸ್ವರ್ಗ ಖಡ್ಗಗಳ ಹೊಳಪಿನ ಕೆಳಗಿದೆ. ದಾಹದಿಂದ ಬಳಲುವವನು ನೀರ ಝರಿ ಬಳಿಗೆ ತಲುಪುವನು. ಈ ದಿನ ನಾನು ನನಗೆ ಪ್ರಿಯರಾದವರನ್ನು ಕಾಣುವೆನು. ಈ ದಿನ ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಅವರ ಸಂಗಡಿಗರನ್ನೂ ಭೇಟಿಯಾಗುವೆನು. ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರನ್ನು ಅಬೂದಾದಿಯ ಮುಝ್ನೀ ಶಹೀದರನ್ನಾಗಿ ಮಾಡಿದ್ದನು. ಅವನು ಅವರಿಗೆ ಒಂದು ಈಟಿಯಿಂದ ತಿವಿದಾಗ ಅವರು ನೆಲಕ್ಕೆ ಬಿದ್ದರು. ಆಗ ಇನ್ನೊಬ್ಬ ಹಝ್ರತ್ ಅಮ್ಮಾರರನ್ನು ಆಕ್ರಮಿಸಿ ಅವರ ತಲೆಕಡಿದನು. ಅನಂತರ ಈ ಇಬ್ಬರು ಜಗಳ ಮಾಡುತ್ತಾ ಮುಆವಿಯರ ಬಳಿಗೆ ಬಂದರು. ಇಬ್ಬರೂ ಹೇಳುತ್ತಿದ್ದರು– ನಾನು ಕೊಂದೆ ಎಂದು.

ಹಝ್ರತ್ ಅಮರೂ ಬಿನ್ ಆಸ್ ಆಗ ಕೆಲವು ತಪ್ಪು ಗ್ರಹಿಕೆಗಳ ಕಾರಣದಿಂದ ಮುಆವಿಯರ ಸಮೀಪವಿದ್ದರು. ಆದರೆ ಅವರಲ್ಲಿ ಒಳಿತು ಇತ್ತೆಂದು ಅವರ ಈ ಹೇಳಿಕೆಯಿಂದ ತಿಳಿಯುತ್ತದೆ. ಹಝ್ರತ್ ಅಮರೂ ಬಿನ್ ಆಸ್ ಹೇಳಿದರು: ಅಲ್ಲಾಹನಾಣೆ ಈ ಇಬ್ಬರು ಕೇವಲ ನರಕಾಗ್ನಿ ಬಗ್ಗೆ ಜಗಳ ಮಾಡುತ್ತಿದ್ದಾರೆ. ಆ ಇಬ್ಬರು ಅಲ್ಲಿಂದ ಹೊರಟು ಹೋದಾಗ ಮುಆವಿಯ ಹಝ್ರತ್ ಅಮರೂ ಬಿನ್ ಆಸ್‌ರೊಂದಿಗೆ ಹೇಳಿದರು: ಜನರು ನಮಗೋಸ್ಕರ ಜೀವ ಬಲಿದಾನ ಮಾಡಿದ್ದಾರೆ. ನೀವು ಆ ಇಬ್ಬರೊಂದಿಗೆ ಹೇಳಿದಿರಿ– ನೀವು ನರಕಾಗ್ನಿ ಬಗ್ಗೆ ಜಗಳ ಮಾಡುತ್ತಿದ್ದೀರಿ ಎಂದು. ಹಝ್ರತ್ ಅಮರೂ ಬಿನ್ ಆಸ್ ಹೇಳಿದರು: ಅಲ್ಲಾಹನಾಣೆ! ಸತ್ಯ ಅದುವೇ ಆಗಿದೆ. ಅಲ್ಲಾಹನಾಣೆ ನೀವು ಸಹ ಅದನ್ನು ತಿಳಿದು ಕೊಂಡಿರುವಿರಿ. ನಾನು ಇಪ್ಪತ್ತು ವರ್ಷಗಳ ಹಿಂದೆಯೇ ಮೃತನಾಗಿದ್ದರೆ ಚೆನ್ನಾಗಿತ್ತು ಎಂದು ನನಗೆ ಭಾಸವಾಗುತ್ತಿದೆ. ಹಾಗೆ ಆಗಿದ್ದರೆ ನಾವು ಈ ರೀತಿ ಜಗಳ ಮಾಡುವ ಸಂದರ್ಭ ಉಂಟಾಗುತ್ತಿರಲಿಲ್ಲ.

ಹಝ್ರತ್ ಅಲಿಯವರ ಖಿಲಾಫತ್ ಕಾಲದಲ್ಲಿ, ಸಿಫ್ಫೀನ್ ಯುದ್ಧದಲ್ಲಿ, ಹಿಜರಿ 37ನೇ ಸಫರ್ ತಿಂಗಳಲ್ಲಿ, ಹಝ್ರತ್ ಅಮ್ಮಾರ್ ತನ್ನ 94ನೇ ವಯಸ್ಸಿನಲ್ಲಿ ಶಹೀದರಾದರು. ಯಹ್‌ಯಾ ಬಿನ್ ಆಬಿಸ್ ಹೇಳುತ್ತಾರೆ: ಹಝ್ರತ್ ಅಮ್ಮಾರ್ ಶಹೀದರಾಗುವಾಗ ಅವರು ಹೇಳಿದ್ದರು, ನನ್ನನ್ನು ನನ್ನ ಬಟ್ಟೆಗಳಲ್ಲಿಯೇ ದಫನ್ ಮಾಡಬೇಕು. ಏಕೆಂದರೆ ನಾನು ಕ್ಷಮೆಯನ್ನು ಯಾಚಿಸುವವನಾಗಿದ್ದೇನೆ. ಹಝ್ರತ್ ಅಲಿಯವರು ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಮತ್ತು ಹಾಶಿಮ್ ಬಿನ್ ಉತ್‌ಬರವರ ಜನಾಝ ನಮಾಝ್ ನಿರ್ವಹಿಸಿದರು. ಹಝ್ರತ್ ಅಮ್ಮಾರ್‌ರವರ ಜನಾಝ ತನ್ನ ಎದುರಿಗೆ ಇರಿಸಿ ಹಾಶಿಮ್‌ರವರ ಜನಾಝ ಅದರ ಆಚೆ ಇರಿಸಿದ್ದರು. ಎರಡು ಜನಾಝಗಳಿಗೆ ಐದು, ಆರು ಅಥವಾ ಏಳು ತಕ್‌ಬೀರ್‌ಗಳನ್ನು ಉಚ್ಚರಿಸಿದರು.

ಸತ್ಯಕ್ಕೋಸ್ಕರ ಹೋರಾಡಿ ಸತ್ಯಕ್ಕೋಸ್ಕರ ಜೀವವನ್ನು ಅರ್ಪಿಸಿದ ಸಹಾಬರು ಅವರಾಗಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***[atba]

*At Masjid Baithul Futhuh, London. On 22-06-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon